**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸುರಪುರ ಸಾಃ ಸುರಪುರ**

**ಸಿಸಿ ನಂ. 492/2020**

ಪಿರ್ಯಾದಿ : ಕರ್ನಾಟಕ ಸರ್ಕಾರ ಅಬಕಾರಿ ಪೋಲಿಸ ಠಾಣೆ, ಸುರಪೂರ

**ವಿರುದ್ದ**

ಆರೋಪಿ : ಬಸಣ್ಣ ತಂದೆ ಭೀಮಣ್ಣ

**ದಂಡ ಪ್ರಕಿಯಾ ಸಂಹಿತೆ ಕಲಂ 240 (1) ರಡಿಯಲ್ಲಿ ದೋಷಾರೋಪಣೆ**

ನಾನು ಬಸವರಾಜ ದಿವಾಣಿ ನ್ಯಾಯಾದೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸುರಪುರ ಈ ಮೂಲಕ ನಿಮ್ಮ ಮೇಲೆ ರಚಿಸುವ ದೋಷಾರೋಪಣೆ ಏನೆಂದರೆ

01. ಬಸಣ್ಣ ತಂದೆ ಭೀಮಣ್ಣ
ವಯಾಃ 52 ವರ್ಷ, ಉಃ ಕೂಲಿ
ಸಾಃ ಸಿದ್ದಾಪುರ ತಾಃ ಹುಣಸಗಿ

ದಿನಾಂಕ 02.04.2020 ರಂದು ಮಧ್ಯಾಹ್ನ 04.00 ಗಂಟೆ ಸಮಯದಲ್ಲಿ ಹುಣಸಗಿ ತಲೂಕಿನ ಸಿದ್ದಾಪುರ(ಬಿ) ಗ್ರಾಮದ ಆರೋಪಿತನಾದ ನೀನು ಸರ್ಕಾರದ ಯಾವುದೇ ಅನುಮತಿ ಇಲ್ಲದೇ ಅನಧಿಕೃತವಾಗಿ ಒಟ್ಟು 07.740 ಲೀ ಮದ್ಯ ಹಾಗೂ 86 ಟೆಟ್ರಾ ಪಾಕೀಟಗಳನ್ನು ನಿನ್ನ ಮನೆಯಲ್ಲಿ ಸಂಗ್ರಹಿಸಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ರಡಿಯಲ್ಲಿ ಶಿಕ್ಷರ್ಹ ಅಪರಾಧವನ್ನು ಈ ನ್ಯಾಯಲಯದ ಸಂಜ್ಞೆಯಡಿಯಲ್ಲಿ ಎಸಗಿದ್ದಿರಿ.

ಎರಡನೆಯದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತನಾದ ನೀನು, ಸರ್ಕಾರದ ಯಾವುದೇ ಅನುಮತಿ ಇಲ್ಲದೇ ಅನಧಿಕೃತವಾಗಿ ಮದ್ಯವನ್ನು ಸಾರ್ವಜನಿಕರಿಗೆ ಮಾರಾಟ ಮಾಡಲು ಮದ್ಯವನ್ನು ಸಂಗ್ರಹಿಸಿ ಇಟ್ಟುಕೊಂಡಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 38(A) ರಡಿಯಲ್ಲಿ ಶಿಕ್ಷರ್ಹ ಅಪರಾಧವನ್ನು ಈ ನ್ಯಾಯಲಯದ ಸಂಜ್ಞೆಯಡಿಯಲ್ಲಿ ಎಸಗಿದ್ದಿರಿ. ಮತ್ತು;

ಕೊನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತನಾದ ನೀನು, ಯಾವುದೇ ಅನುಮತಿ ಇಲ್ಲದೇ ಅನಧಿಕೃತವಾಗಿ ಮದ್ಯವನ್ನು ಸ್ವಾಧೀನತೆ ಹೊಂದಿ ಸದರಿ ವಸ್ತುಗಳು ಮಾದಕ ವಸ್ತುಗಳೆಂದು ತಿಳಿದೂ ಸಹ ಸಾರ್ವಜನಿಕರಿಗೆ ಮಾರಾಟ ಮಾಡಲು ಪ್ರದರ್ಷಣೆ ಮಾಡಿದ್ದು, ಆ ಮೂಲಕ ಭಾ. ದಂ. ಸಂ. ಕಲಂ. 273 ರಡಿಯಲ್ಲಿ ಶಿಕ್ಷರ್ಹ ಅಪರಾಧವನ್ನು ಈ ನ್ಯಾಯಲಯದ ಸಂಜ್ಞೆಯಡಿಯಲ್ಲಿ ಎಸಗಿದ್ದಿರಿ.

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ

ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೆನೆ.

ಪ್ರ.ದಾ.ನ್ಯಾ.ದಂಡಾಧಿಕಾರಿಗಳು
ಸುರಪುರ

**<u>ಆರೋಪಿಯ ಉತ್ತರ</u>**

ಪ್ರಶ್ನೆ 1) ಈಗ ನಿಮಗೆ ಓದಿ ಹೇಳಿದ ದೋಷಾರೋಪಣೆಯ/ಆಪಾದನೆಯ ಸಾರಾಂಶ ತಿಳಿಯಿತೇ?

ಉತ್ತರಃ

ಪ್ರಶ್ನೆ 2) ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?

ಉತ್ತರಃ

(ಈ ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣೀಕರಿಸುತ್ತೇನೆ)

ಆರೋಪಿ ಸಹಿ

(ಬಸವರಾಜ)
ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.ಗಳು.
ಸುರಪೂರ.

ಸ್ಥಳಃಸುರಪೂರ
ದಿನಾಂಕಃ 24.07.2025